ಅ) ಇಲ್ಲ

ಇ) ಇಲ್ಲ

ಈ) ಉದ್ದೇಶಪೂರಿತ ಪ್ರತಿಷ್ಠಿತ ಹಾಗೂ ಸಾಲ ಮರುಪಾವತಿ ಮಾಡಲು ಶಕ್ತಿಯುಳ್ಳ ಸುಸ್ತಿಗಾರರಿಂದ ವಸೂಲು ಮಾಡಲು ಜಪ್ತಿ ಮಾಡಲಾಗುತ್ತದೆ.

ರಾಜ್ಯದಲ್ಲಿ ಅಂಗನವಾಡಿ ನೌಕರರ ಭತ್ಯೆ ಹೆಚ್ಚಳ

1679 (2259) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) - ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಾಂತ ಅಂಗನವಾಡಿ ನೌಕರರು ಇತ್ತೀಚಿಗೆ ಸಂಬಳ ಹೆಚ್ಚಿಗೆ ಕೋರಿ ಸತ್ಯಾಗ್ರಹ ಮಾಡಿರುವುದು ನಿಜವೇ ;

ಆ) ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ನಿಲುವೇನು ;

ಇ) ಯಾವಾಗ ಸಂಬಳ ಹೆಚ್ಚಿಗೆ ಮಾಡಲಾಗುವುದು ;

ಈ) ಈ ಆಯವ್ಯಯದಲ್ಲಿ ಮಾಡಲಾಗುತ್ತದೆಯೇ ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ನಿಜ

ಆ) ಕೇಂದ್ರ ಸರ್ಕಾರದಿಂದ ಗೌರವಧನವನ್ನು ಈಗಾಗಲೇ ಹೆಚ್ಚಿಸಲಾಗಿದೆ.

ಇ) ಕೇಂದ್ರ ಸರ್ಕಾರದಿಂದ ದಿನಾಂಕ: 16.1.03 ರಂದು ಆದೇಶ ಹೊರಡಿಸಿದ್ದು ಜರೂರಾಗಿ ಬಿಡುಗಡೆಗೊಳಿಸಲಾಗುವುದು.

ಈ) ಉದ್ಭವಿಸುವುದಿಲ್ಲ.

ಸೌಹಾರ್ದ ಸಹಕಾರಿಗಳಿಗೆ ನೋಂದಣಿ ಪೂರ್ವದ ಷರತ್ತುಗಳು

1680 (2260) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) - ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಸೌಹಾರ್ದ ಸಹಕಾರಿಗಳಿಗೆ ನೋಂದಣಿ ಪೂರ್ವದಲ್ಲಿ ಸದಸ್ಯರನ್ನು ಹಾಗೂ ಷೇರು ಹಣ ಸಂಗ್ರಹಿಸುವ ಬಗ್ಗೆ ಪೂರ್ವ ಷರತ್ತನ್ನು ವಿಧಿಸುತ್ತಿರುವ ವಿಚಾರ ನಿಜವೇ ; ಈ ರೀತಿಯ ಕ್ರಮವೇಕೆ ;

ಆ) ಈಗಾಗಲೇ ಸದರಿ ನಿರ್ಬಂಧಕರು ಪತ್ತಿನ ಸೌಹಾರ್ದ ಸಹಕಾರಿಗಳಿಗೆ ಈ ಪೂರ್ವ ಷರತ್ತನ್ನು ವಿಧಿಸಿರುವರೇ ;

ಇ) ಹೌದಾದಲ್ಲಿ ಪೂರ್ವ ಷರತ್ತು ವಿಧಿಸಿರುವ ಅಧಿಕಾರವು ಕಾಯಿದೆಯ ನಿಯಮಗಳಿಗೆ ವಿರುದ್ಧವಲ್ಲವೇ? ಈ ಸಂದರ್ಭಗಳಲ್ಲಿ ಇದಕ್ಕಾಗಿ ಕೈಗೊಂಡ ಕ್ರಮಗಳೇನು ;

ಈ) ನಿಬಂಧಕರ ಈ ನಿರ್ಧಾರಕ್ಕೆ ಸರ್ಕಾರದ ನಿಲುವೇನು ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ಹೌದು. ಪತ್ತಿನ ಸಹಕಾರಿಗಳಿಗೆ ಮಾತ್ರ ಈ ಷರತ್ತನ್ನು ವಿಧಿಸಲಾಗುತ್ತಿದ್ದು, ಸಾಲ ನೀಡುವ ಉದ್ದೇಶ ಹೊಂದಿರುವ ಸಹಕಾರಿಗಳಿಗೆ ಬಂಡವಾಳ ಹಾಗೂ ಸದಸ್ಯರ ಸಂಖ್ಯೆ ಪ್ರಮುಖವಾಗಿರುತ್ತದೆ. ಸೌಹಾರ್ದ ಸಹಕಾರಿಗಳು ಆರ್ಥಿಕ ಉದ್ಯಮಗಳಾಗಿದ್ದು, ಆರ್ಥಿಕ ಸಬಲತೆ